# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 153 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 05-12-2023. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಬಳ್ಳಾರಿಯ ಜೀನ್ಸ್ ಸಿದ್ಧ ಉಡುಪು ಘಟಕಗಳ ಅಭಿವೃದ್ಧಿಗಾಗಿ 'ಜೀನ್ಸ್ ಅಪೆರಲ್ ಪಾರ್ಕ್' ಸ್ಥಾಪಿಸಲು ಸರ್ಕಾರ ಮುಂದಾಗಿದೆಯೇ; | ಹೌದು |
| (ಆ) | ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚಿನ ಕುಟುಂಬಗಳು ಜೀನ್ಸ್ ಉದ್ಯಮವನ್ನೇ ಅವಲಂಬಿಸಿದ್ದು, ತನ್ಮೂಲಕ ಸಾವಿರಾರು ಕುಟುಂಬಗಳಿಗೆ ಹೆಚ್ಚಿನ ನೆರವು ನೀಡುವ ದೃಷ್ಟಿಯಿಂದ ಜೀನ್ಸ್ ಅಪೆರಲ್ ಪಾರ್ಕ್ ಸ್ಥಾಪನೆಗಾಗಿ ಕ್ರಿಯಾ ಯೋಜನೆ ಸಿದ್ಧಗೊಂಡಿದೆಯೇ: | ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರನ್ವಯ ಗ್ರೀನ್ ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ ಅನ್ನು ವೈಯಕ್ತಿಕ ಉದ್ಯಮಿ/ ಎಸ್.ಪಿ.ವಿ ಮುಖಾಂತರ ಸ್ಥಾಪಿಸಲು ಕನಿಷ್ಠ 15 ಎಕರೆ ವಿಸ್ತೀರ್ಣ ಜಮೀನು ಹೊಂದಿದ್ದರೆ, ಪಾರ್ಕ್‌ನ ಸಾಮಾನ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಯೋಜನಾ ವೆಚ್ಚದ ಮೇಲೆ ಶೇ.40 ರಷ್ಟು ಅಥವಾ ರೂ.40.00 ಕೋಟಿವರೆಗೆ ಸಹಾಯಧನವನ್ನು ಒದಗಿಸಲು ಅವಕಾಶವಿದೆ.<br><br>ಅದರನ್ವಯ, ಬಳ್ಳಾರಿಯಲ್ಲಿ ಜೀನ್ಸ್ ಸಿದ್ಧ ಉಡುಪುಗಳ ಘಟಕಗಳನ್ನು ಸ್ಥಾಪಿಸಲು ಟೆಕ್ಸ್‌ಟೈಲ್ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲು ಬಳ್ಳಾರಿ ಗಾರ್ಮೆಂಟ್ ಎಕ್ಸ್‌ಪೋರ್ಟ್ ಕ್ಲಸ್ಟರ್ ಪ್ರೈ. ಲಿ., ಬಳ್ಳಾರಿ ಎಂಬ ಎಸ್.ಪಿ.ವಿ ಯು ಆಸಕ್ತಿ ತೋರಿಸಿರುತ್ತದೆ. ಸದರಿ ಎಸ್.ಪಿ.ವಿ ಗೆ ಆಲದಹಳ್ಳಿ, ಕೈಗಾರಿಕಾ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ ಯು 50 ಎಕರೆ ಜಮೀನನ್ನು ಹಂಚಿಕೆ ಮಾಡಿರುತ್ತದೆ. ಸದರಿ ಎಸ್.ಪಿ.ವಿ ಯ ಮುಖಾಂತರ ಜವಳಿ ಪಾರ್ಕ್‌ನ್ನು ಸ್ಥಾಪಿಸಲು ಅವಶ್ಯವಿರುವ ಪ್ರಾರಂಭಿಕ ಕ್ರಮಗಳು ಅಂದರೆ, ವಿವಿಧ ಪ್ರಮಾಣ ಪತ್ರಗಳನ್ನು ಪಡೆಯುವ ಪ್ರಕ್ರಿಯೆಗಳು ಜಾರಿಯಲ್ಲಿರುತ್ತದೆ.<br><br>ಜೀನ್ಸ್ ಅಪೆರಲ್ ಪಾರ್ಕ್ ಸ್ಥಾಪನೆಗಾಗಿ ಕ್ರಿಯಾಯೋಜನೆ ಸಿದ್ಧಗೊಂಡಿರುವುದಿಲ್ಲ. |
| (ಇ) | ಸಿದ್ಧಗೊಂಡಿದ್ದಲ್ಲಿ, ಯಾವಾಗ ಕಾರ್ಯರೂಪಕ್ಕೆ ತರಲು ಸರ್ಕಾರ ಉದ್ದೇಶಿಸಿದೆ? | ಉದ್ಭವಿಸುವುದಿಲ್ಲ. |

ಸಂಖ್ಯೆ: CI 134 JAKE 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು